ಅಸಲು ದಾವಾ ನಂ.252/2015

ಡಿ.ಡಬ್ಲ್ಯೂ-6.

**ಸಾಕ್ಷಿಯನ್ನು ಇಂದು ದಿನಾಂಕಃ 24.11.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ-ಪ್ರತಿವಾದಿ ಪರ ಎಂ.ವಿ.ಇ. ವಕೀಲರಿಂದ**

ನನ್ನ ಹೆಸರು ಹಣಮಂತ ತಂದೆ ಲಕ್ಷ್ಮಣ ಫೇರ ಇರುವುದಿಲ್ಲ ಎಂದರೆ ಸರಿ. ನನ್ನ ಹೆಸರು ಹಣಮಂತ ತಂದೆ ಶರಣಪ್ಪ ಕೋರೆ ಎಂದರೆ ಸರಿ. ಸರ್ವೆ ನಂ.9 ರಲ್ಲಿನ 1 ಎಕರೆ 17 ಗುಂಟೆ ವಾದಿಯ ಹಿರಿಯರ ಅಸ್ತಿ ಎಂದರೆ ಸರಿ. 1978 ರಿಂದ ವಾದಿಯ ಹೆಸರಿನಿಂದ ಪಹಣಿ ಪತ್ರಿಕೆಗಳು ದಾವಾಆಸ್ತಿಯಲ್ಲಿ ಬರುತ್ತಿವೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಕಬ್ಜೆಯಲ್ಲಿ ಪ್ರತಿವಾದಿ ಇರುತ್ತಾನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ವಾದಿ ಮಾಲೀಕ ಹಾಗೂ ಸ್ವಾಧೀನದಾರನು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಕಡಗಂಚಿ ಊರಿನವನು ಎಂದರೆ ಸರಿ. 2 ನೇ ಪ್ರತಿವಾದಿ ವಾದಿಯ ಮನೆಯ ಖಳದ ಹೊಲ್ಯಾ ಅಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಆಂಗ್ಲ ಭಾಷೆಯಲ್ಲಿ ಬರೆದಿದ್ದು ನನಗೆ ನನ್ನ ಪ್ರಮಾಣ ಪತ್ರದ ಅಂಶಗಳು ಗೊತ್ತಿಲ್ಲ ಎಂದರೆ ಸರಿ. ಭೂಮಿ ಹಾಗೂ ಮನೆಯ ಮಾರುಕಟ್ಟೆ ಮೌಲ್ಯ ನಿಗದಿಪಡಿಸುವ ಅಧಿಕಾರ ಸಬರಜಿಸ್ಟ್ರಾರ ಕಚೇರಿಯವರಿಗೆ ಇರುತ್ತದೆ ಎಂದರೆ ಸರಿ. ಖರೀದಿ ಮಾಡುವಾಗ ಮಾರುಕಟ್ಟೆ ಬೆಲೆಗೆ ತೆರಿಗೆ ತುಂಬಿ ನೊಂದಣಿ ಮಾಡಿಸಿಕೊಳ್ಳಬೇಕಾಗುತ್ತದೆ ಎಂದರೆ ಸರಿ. ದಾವಾ ಆಸ್ತಿ ಆಳಂದ ಕಲಬುರಗಿ ಹೆದ್ದಾರಿಗೆ ಅಂಟಿಕೊಂಡು ಇರುತ್ತದೆ ಎಂದರೆ ಸರಿ. 1999 ರಲ್ಲಿ ದಾವಾ ಆಸ್ತಿಯ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಸಾಮಾನ್ಯವಾಗಿ ಯಾವುದಾದರೂ ಹೊಲ ಮನೆ ಖರೀದಿ ಮಾಡಬೇಕಾದರೆ ಕ್ರಯ ಪತ್ರ ಅಥವಾ ಯಾವುದಾದರೂ ನೊಂದಾಯಿತ ದಾಖಲೆಯಿಂದ ಮಾಡಿಕೊಳ್ಳಬೇಕಾಗುತ್ತದೆ ಎಂದರ ನನಗೆ ಗೊತ್ತಿಲ್ಲ. ಯಾವುದಾದರೂ ವ್ಯಕ್ತಿಯ ಹೆಸರು ಕಂದಾಯದಾಖಲೆಗಳಲ್ಲಿ ಸೇರಿಸಬೇಕಾದರೆ ಹಕ್ಕು ಬದಲಾವಣೆ ಆಗಬೇಕು ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಹಕ್ಕು ಬದಲಾವಣೆ ಮಾಡುವ ಮುನ್ನ ಕಂದಾಯ ಇಲಾಖೆಯವರು ನೋಟಿಸ್ಸು ನೀಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆಯ ಹೆಸರಿನಲ್ಲಾಗಲೀ ಅಥವಾ ಚಿಕ್ಕಪ್ಪನ ಹೆಸರಿನಲ್ಲಾಗಲೀ ದಾವಾ ಅಸ್ತಿಯ ದಾಖಲೆಗಳು ಇರುವುದನ್ನು ನಾನು ನೋಡಿರುವುದಿಲ್ಲ. ಸಾಮಾನ್ಯವಾಗಿ ಒಂದು ಜಮೀನನ್ನು ಮಾರಾಟ ಮಾಡಲು ಸದರಿ ವ್ಯಕ್ತಿ ಅದರ ಮಾಲೀಕ ಇರಬೇಕಾಗುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ತನ್ನ ಹೆಸರಿಗೆ ಮಾಡಿಕೊಂಡ ಬಗ್ಗೆ ನಾನು ದಾಖಲಾತಿಗಳನ್ನು ನೋಡಿರುವುದಿಲ್ಲ. ಸದರಿ ವ್ಯವಹಾರ ನನ್ನ ಸಮಕ್ಷಮ ಆಗಿರುವುದಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿನ ಅಂಶಗಳು ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸುಳುಳ ಇರುತ್ತವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲಿಲಸಿ ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.